ಓ.ಎಸ್ 35/2012

ಪಿ ಡಬ್ಲ್ಯು 2

**ದಿನಾಂಕಃ 15-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಒ ಜೆ ವಕೀಲರಿಂದಃ-**

1) ನನಗೆ 71 ರಿಂದ 72 ವರ್ಷ ವಯಸ್ಸು. ನನಗೆ ಸಾಕ್ಷಿಯ ಕಟಕಟೆಯಲ್ಲಿ ದೊಡ್ಡ ಅಕ್ಷರಗಳಿಂದ ಬರೆದಿರುವ ಅಕ್ಷರಗಳನ್ನು ಓದಲು ಆಗುವುದಿಲ್ಲ, ಕಣ್ಣುಗಳು ಮಂಜಾಗಿವೆ. ವಾದಿಯ ತಂದೆ ಭದ್ರಪ್ಪ ನನಗೆ ಮರಣ ಶಾಸನ ಪತ್ರ ಬರೆಯುವುದಕ್ಕಿಂತ 3 ವರ್ಷಗಳಿಂದ ಪರಿಚಯ. ನಾನು ಸದರಿ ಸಮಯದಲಕ್ಕಿ ಶಿಕಾರಿಪುರದ ಸಿನಿಮಾ ಟಾಕೀಸ್ ನಲ್ಲಿ ಟಿಕೇಟ್ ಪರಿಶೀಲನೆ ಮಾಡಿ ಒಳಗೆ ಬಿಡುವ ಕೆಲಸ ಮಾಡುತ್ತಿದ್ದೆ. ಸಿನಿಮಾ ಟಾಕೀಸ್‌ಗೆ ಬಹಳ ಜನ ಬರುತ್ತಾರೆ ಹೋಗುತ್ತಾರೆ ಅಂದರೆ ಸರಿ. ಭದ್ರಪ್ಪ ಯಾವ ದಿನಾಂಕದಂದು ಪರಿಚಯ ಆದ ಅಂದರೆ ಸಾಕ್ಷಿಯು 2 ವರ್ಷಗಳಿಂದಲೂ ಪರಿಚಯ ಇದ್ದ. ಸದರಿ ಭದ್ರಪ್ಪ ನಿರಂತರವಾಗಿ ಸಿನಿಮಾ ಟಾಕೀಸ್ ಗೆ ಸಿನಿಮಾ ನೋಡಲು ಶಿಕಾರಿಪುರಕ್ಕೆ ಬರುತ್ತಿದ್ದನಾ ಅಂದರೆ ಸಾಕ್ಷಿಯು ವಾರದಲ್ಲಿ ಒಮ್ಮೆ ಅಥವಾ ಎರಡು ದಿವಸ ಬರುತ್ತಿದ್ದ. ಸದರಿ ಭದ್ರಪ್ಪ ಮ್ಯಾಟ್ನಿ ಶೋ ಗೆ ಬರುತ್ತಿದ್ದ. ತೊಗರ್ಸಿ ಶಿರಾಳಕೊಪ್ಪಕ್ಕೆ ಹತ್ತಿರವಿರುತ್ತದೆ ಅಂದರೆ ಸರಿ, ಶಿರಾಳಕೊಪ್ಪದಲ್ಲಿ ಸಿನಿಮಾ ಟಾಕೀಸ್ ಇರುತ್ತದೆ ಅಂದರೆ ಸರಿ. ಶಿರಾಳಕೊಪ್ಪದಲ್ಲಿ ಟಾಕೀಸ್ ಇದ್ದರೂ ಸಹ ಶಿಕಾರಿಪುರಕ್ಕೆ ಭದ್ರಪ್ಪ ಏಕೆ ಬರುತಿದ್ದ ಅಂದರೆ ಸಾಕ್ಷಿಯು ನಾವು ಒಳ್ಳೆ ಸಿನಿಮಾಗಳನ್ನು ಹಾಕುತ್ತಿದ್ದೆವು ಆದ್ದರಿಂದ ಬರುತ್ತಿದ್ದ ಎಂದು ಹೇಳುತ್ತಾರೆ.

2) ಭದ್ರಪ್ಪ ಏನು ಕೆಲಸ ಮಾಡುತ್ತಿದ್ದ ಅಂದರೆ ಸಾಕ್ಷಿಯು ವ್ಯವಸಾಯ ಮಾಡುತ್ತೇನೆ ಎಂದು ಹೇಳಿದ್ದ. ಭದ್ರಪ್ಪ ಒಬ್ಬನೇ ಸಿನಿಮಾ ನೋಡಲು ಬರುತ್ತಿದ್ದ. ಭದ್ರಪ್ಪನಿಗೆ ಜಮೀನು ಇರುತ್ತದೆ ಎಂದು ಅವನು ಹೇಳಿಲ್ಲ. ವ್ಯವಸಾಯ ಬಿಟ್ಟು ಬೇರೆ ಏನಾದರೂ ಭದ್ರಪ್ಪ ಕೆಲಸ ಮಾಡುತ್ತಿದ್ದನಾ ಅಂದರೆ ಗೊತ್ತಿಲ್ಲ. ಭದ್ರಪ್ಪನಿಗೆ ಕನ್ನಡ ಓದಲು ಬರೆಯಲು ಬರುತ್ತಿತ್ತಾ ಅಂದರೆ ಸಾಕ್ಷಿಯು ದಿನ ಪತ್ರಿಕೆಗಳನ್ನು ಓದುತ್ತಿದ್ದ ಎಂದು ಹೇಳುತ್ತಾರೆ. ಓದಲು ಬರುತ್ತಿದ್ದರೆ ಬರೆಯಲು ಸಹ ಬರುತ್ತದೆ ಅಂದರೆ ಇರಬಹುದು ಎಂದು ಹೇಳುತ್ತಾರೆ. ಎಂದಾದರೂ ಭದ್ರಪ್ಪ ಯಾವುದೇ ಪತ್ರಕ್ಕೆ ನಿಮ್ಮ ಸಮಕ್ಷಮ ಸಹಿ ಮಾಡಿದ್ದನ ಅಂದರೆ ಇಲ್ಲ. ಯಾವತ್ತು ನಿಮ್ಮ ಸಮಕ್ಷಮ

ಭದ್ರಪ್ಪ ಸಹಿ ಮಾಡಿದನು ಅಂದರೆ ಸಾಕ್ಷಿಯು ಉಪ ನೋಂದಣಿ ಕಚೇರಿಯಲ್ಲಿ ನನ್ನ ಸಮಕ್ಷಮ ಸಹಿ ಮಾಡಿದ್ದಾನೆ ಎಂದು ಹೇಳುತ್ತಾರೆ. ಹೆಬ್ಬಿಟ್ಟಿನ ಗುರುತು ಎಡಗೈ ಹೆಬ್ಬೆಟ್ಟಿನಿಂದ ಮಾಡುತ್ತಾರೆ ಹಾಗೂ ಸಹಿ ಅಂದರೆ ಪೆನ್ನಿನಿಂದ ಮಾಡುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಉಪ ನೋಂದಣಿ ಕಚೇರಿಯಲ್ಲಿ ಹೆಬ್ಬಟ್ಟಿನ ಗುರುತು ತೆಗೆದುಕೊಂಡಿರುತ್ತಾರೆ ಮತ್ತು ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಿಡಿ-9 ರಲ್ಲಿ ಭದ್ರಪ್ಪನ ಸಹಿ ಎಲ್ಲಿಯೂ ಇಲ್ಲ ಎಂದು ಹೇಳುತ್ತಾರೆ. ನಿಪಿ-9 ರಲ್ಲಿ 2 ನೇ ಪುಟದಲ್ಲಿ ನನ್ನ ಸಮಕ್ಷಮ ಭದ್ರಪ್ಪ ಹೆಬ್ಬಿಟ್ಟಿನ ಗುರುತು ಹಾಕಿರುತ್ತಾನೆ ಎಂದು ಹೇಳಿ ಒಂದು ಹೆಬ್ಬಿಟ್ಟಿನ ಗುರುತು ಗುರುತಿಸಿರುತ್ತಾರೆ ಅದನ್ನು ನಿಪಿ-9 (ಡಿ) ಎಂದು ಗುರುತಿಸಲಾಯಿತು. ಹಾಗೂ ಇನ್ನೊಂದು ಹೆಬ್ಬಿಟ್ಟಿನ ಗುರುತನ್ನು ಪಕ್ಕದಲ್ಲಿ ಹಾಕಿರುತ್ತಾರೆ ಎಂದು ಹೇಳುತ್ತಾರೆ ಅದನ್ನು ನಿಪಿ-9(ಇ) ಎಂದು ಗುರುತಿಸಲಾಯಿತು. ಸದರಿ ಪಕ್ಕೆಕ್ಕೆ ಹಾಕಿದ ಹೆಬ್ಬಿಟ್ಟಿನ ಗುರುತು ಮೊದಲಿನ ಹೆಬ್ಬಿಟ್ಟಿನ ಗುರುತು ಸರಿಯಾಗಿ ಬರಲಿಲ್ಲ ಅಂತಾ ಹೇಳಿ ಹಾಕಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಯಾವುದೇ ಹೆಬ್ಬಿಟ್ಟಿನ ಗುರುತುಗಳನ್ನು ನೋಡಿದರೆ ಗುರುತಿಸುತ್ತೀರಾ ಅಂದರೆ ಸಾಕ್ಷಿಯು ನನ್ನ ಸಮಕ್ಷಮ ಭದ್ರಪ್ಪ ಹಾಕಿದ್ದರಿಂದ ಅವುಗಳನ್ನು ಗುರುತಿಸಿದ್ದೇನೆ ಎಂದು ಹೇಳುತ್ತಾರೆ. ಭದ್ರಪ್ಪನ ಎಷ್ಟು ಹೆಬ್ಬಿಟ್ಟಿನ ಗುರುತುಗಳನ್ನು ಹಾಕಿಸಲಾಗಿದೆ ಅಂದರೆ ಸಾಕ್ಷಿಯು ನನ್ನ ಸಮಕ್ಷಮ ಎರಡು ಹೆಬ್ಬಿಟ್ಟಿನ ಗುರುತು ಹಾಕಿಸಿದರು ಹಾಗೂ ಇನ್ನೊಂದು ಹೆಬ್ಬಿಟ್ಟಿನ ಗುರುತನ್ನು ದೀಕ್ಷಿತ್ ರವರು ಮತ್ತೊಂದು ಹಾಳೆ ಮೇಲೆ ಪಡೆದರು ಎಂದು ಹೇಳುತ್ತಾರೆ. ಸದರಿ ಮತ್ತೊಂದು ಹೆಬ್ಬಿಟ್ಟಿನ ಗುರುತನ್ನು ನನ್ನ ಸಮಕ್ಷಮ ಹಾಕಿಕೊಂಡಿಲ್ಲ ಅಂದರೆ ಸಾಕ್ಷಿ ನಾನು ಅಲ್ಲೆ ಕಚೇರಿಯಲ್ಲಿ ಇದ್ದೆನು ಎಂದು ಹೇಳುತ್ತಾರೆ. ಸಾಕ್ಷಿಯು ಪುಟ 1 ರಲ್ಲಿ ನಿಪಿ-9 ರಲ್ಲಿ ಹೆಬ್ಬಿಟ್ಟಿನ ಭದ್ರಪ್ಪನ ಹೆಬ್ಬಿಟ್ಟಿನ ಗುರುತು ಎಂದು ಹೇಳಿ ಗುರುತಿಸಿರುತ್ತಾರೆ ಅದನ್ನು ನಿಪಿ-9(ಎಫ್ ) ಎಂದು ಗುರುತಿಸಲಾಯಿತು. ನಿಪಿ-9(ಎಫ್) ಭದ್ರಪ್ಪನ ಹೆಬ್ಬಿಟ್ಟಿನ ಗುರುತನ್ನು ದಿಕ್ಷೀತ್ ರವರು ಹಾಕಿಸಿಕೊಂಡಿರುತ್ತಾರೆ.

2) ಉಪ ನೋಂದಣಿ ಕಚೇರಿಗೆ ನಾನು ಮತ್ತು ಇನ್ನೊಬ್ಬ ಸಾಕ್ಷಿ ಹೋಗಿದ್ದೆವು. ಉಪ ನೋಂದಣಿ ಕಚೇರಿಗೆ ಹೋಗುವ ಮುಂಚೆ ನಾವು ಬೇರೆ ಎಲ್ಲೂ ಹೋಗಿಲ್ಲ. ನಿಪಿ-9 ನ್ನು ದೀಕ್ಷಿತ್ ರವರು ಕೈಯಿಂದ

ಬರೆದಿರುತ್ತಾರೆ. ನಿಪಿ–9 ನ್ನು ಬೆರಳಚ್ಚು ಮಾಡಲಾಗಿದೆ ಅಂದರೆ ಸಾಕ್ಷಿಯು ಮೊದಲು ಒಂದು ಪತ್ರವನ್ನು ಬರವಣಿಗೆಯಲ್ಲಿ ತಯಾರಿಸಿದರು ನಂತರ ಅದನ್ನು ಟೈಪ್ ಮಾಡಿಸಿದರು ಎಂದು ಹೇಳುತ್ತಾರೆ. ನಿಪಿ–9 ಟೈಪ್ ಮಾಡಿದ ಪ್ರತಿ ಅಂದರೆ ಸರಿ. ಬರವಣಿಗೆ ಮಾಡಿದ ಪತ್ರವನ್ನು ನಮಗೆ ದೀಕ್ಷಿತ್ ರವರು ಓದಿ ಹೇಳಿರುತ್ತಾರೆ ಸದರಿ ಬರವಣಿಗೆ ಮಾಡಿದ ಪತ್ರವು ಇರುತ್ತದೆಯಾ ಅಂದರೆ ಅದು ದೀಕ್ಷಿತ್ ರವರಿಗೆ ಗೊತ್ತು ಎಂದು ಹೇಳುತ್ತಾರೆ. ಭದ್ರಪ್ಪನಿಗೆ ಸಹಿ ಮಾಡಲು ಬರುತ್ತದೆ ಮತ್ತು ಹೆಬ್ಬಿಟ್ಟಿನ ಗುರುತು ಹಾಕಿಲ್ಲ ಅಂದರೆ ಸಾಕ್ಷಿಯು ಭದ್ರಪ್ಪನಿಗೆ ಆ ದಿನ ಸಹಿ ಮಾಡಲು ಬರಲಿಲ್ಲ ಆದ್ದರಿಂದ ಹೆಬ್ಬಿಟ್ಟಿನ ಗುರುತು ತೆಗೆದುಕೊಂಡಿರುತ್ತಾರೆ. ಭದ್ರಪ್ಪನ ಸಹಿ ಮೊದಲು ಬರವಣಿಗೆ ಮಾಡಿದ ದಾಖಲೆ ಮೇಲೆ ತೆಗೆದುಕೊಳ್ಳಲು ದೀಕ್ಷಿತ್ ರವರು ಪ್ರಯತ್ನಪಟ್ಟರು ಆದರೆ ಸಹಿ ಮಾಡಲು ಬರಲಿಲ್ಲ. ಭದ್ರಪ್ಪನಿಗೆ ಸಹಿ ಮಾಡಲು ಆಗಲಿಲ್ಲ ಹಾಗಾಗಿ ಆತನ ಹೆಬ್ಬಿಟ್ಟಿನ ಗುರುತನ್ನು ತೆಗೆದುಕೊಳ್ಳಲಾಗಿದೆ ಎಂದು ನಿಪಿ–9 ರಲ್ಲಿ ಬರೆದಿರುವುದಿಲ್ಲ.

4) ಭದ್ರಪ್ಪನಿಗೆ ಆ ದಿನ ಆರೋಗ್ಯ ಸರಿ ಇರಲಿಲ್ಲ ಜ್ವರ ಬಂದಿತ್ತು. ಆ ದಿನ ಭದ್ರಪ್ಪ ಆಸ್ಪತ್ರೆಗೆ ಎನಾದರೂ ಹೋಗಿದ್ದನಾ ಅಂದರೆ ಗೊತ್ತಿಲ್ಲ ನಾವು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ನಿಪಿ–9 ಮರಣ ಶಾಸನ ಪತ್ರ ಬರೆಯುವುದಕ್ಕಿಂತ 5–6 ವರ್ಷಗಳ ಹಿಂದೆ ಪ್ಯಾರಲೆಸಿಸ್ಸ / ಪಾರ್ಶವ ವಾಯು ಆಗಿತ್ತು ಎಂದರೆ ಸರಿ. ಕೈ ಸ್ವಲ್ಪ ಬಲಗೈ ಸೊಟ್ಟು ಆಗಿತ್ತು ಎಂದು ಹೇಳುತ್ತಾರೆ. ಭದ್ರಪ್ಪನಿಗೆ ಪ್ಯಾರಲೆಸಿಸ್ಸ / ಪಾರ್ಶವ ವಾಯು ಆಗಿ ಆತನಿಗೆ ಓಡಾಡಲು ಸಹ ಆಗುತ್ತಿರಲಿಲ್ಲ ಅಂದರೆ ಸರಿಯಲ್ಲ. ಭದ್ರಪ್ಪನಿಗೆ ಯಾವುದೇ ವಿಷಯ ಹೇಳಿದರೂ ತಿಳಿದುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಭದ್ರಪ್ಪನಿಗೆ ದೀಕ್ಷಿತ್ ರವರ ಪರಿಚಯ ಇರಲಿಲ್ಲ ನಾನೇ ಕರೆದುಕೊಂಡುಹೋಗಿ 19 ನೇ ತಾರೀಖಿನಂದು ಪರಿಚಯ ಮಾಡಿಸಿರುತ್ತೇನೆ ಅಂದರೆ ಸರಿ. ಭದ್ರಪ್ಪ ಯಾವಾಗ ಛಾಪಾ ಕಾಗದ ಪತ್ರವನ್ನು ಯಾವ ದಿನಾಂಕದಂದು ಖರೀದಿ ಮಾಡಿದ್ದರು ಅಂದರೆ ಸಾಕ್ಷಿಯು 19 ನೇ ತಾರೀಖಿನಂದು ನಾವು ಹೇಳಿ ಬಂದೆವು ಅದನ್ನು 20 ನೇ ತಾರೀಖಿನಂದು ಖರೀದಿ ಮಾಡಿರಬಹುದು ನನಗೆ ಗೊತ್ತಿಲ್ಲ. ಛಾಪಾ ಕಾಗದವನ್ನು ಯಾರು ಖರೀದಿ ಮಾಡಿದರು ಅಂದರೆ ನನಗೆ ಗೊತ್ತಿಲ್ಲ. ಛಾಪಾ

ಕಾಗದವನ್ನು ಹೇಗೆ ಖರೀದಿ ಮಾಡಬೇಕು ಎಂದು ನನಗೆ ಗೊತ್ತಿರುತ್ತದೆ. ಛಾಪಾ ಕಾಗದವನ್ನು ಖರೀದಿ ಮಾಡುವವರು ಸ್ಟಾಂಪ್ ವೆಂಡರ್ ಹತ್ತಿರ ಹೋಗಿ ಪುಸ್ತಕದಲ್ಲಿ ನಮೂದು ಮಾಡಿ ಸಹಿ ಮಾಡಿ ಖರೀದಿ ಮಾಡಬೇಕು ಅಂದರೆ ಸರಿ.

5) ನಾನು 20 ನೇ ತಾರೀಖಿನಂದು ದೀಕ್ಷಿತಿ ರವರ ಕಚೇರಿಗೆ ಹೋಗಿದ್ದೆ ಆಗ ಪತ್ರವನ್ನು ಓದಿ ಹೇಳಿದರು ಆಗ ಭದ್ರಪ್ಪ ಇರಲಿಲ್ಲ ನಂತರ ಬಂದನು. ಸದರಿ ಪತ್ರವನ್ನು ಓದಿ ಹೇಳುವಾಗ ನಾನು ಮತ್ತು ಇನ್ನೊಬ್ಬ ಸಾಕ್ಷಿದಾರ ಶೇಖರಪ್ಪ ಇದ್ದೆವು. ಮರಣ ಶಾಸನ ಪತ್ರಕ್ಕೆ ಉಪ ನೋಂದಣಿ ಕಚೇರಿಯಲ್ಲಿ ನಾನು ಮೊದಲು ನಂತರ ಶೇಖರಪ್ಪ ಆಮೇಲೆ ಭದ್ರಪ್ಪ ನಮ್ಮ ಸಮಕ್ಷಮ ಸಹಿ ಹಾಕಲು ಬರಲಿಲ್ಲ ಹಾಗಾಗಿ ಭದ್ರಪ್ಪ ಹೆಬ್ಬೆಟ್ಟಿನ ಗುರುತು ಹಾಕಿದನು. ಉಪ ನೋಂದಣಿ ಕಚೇರಿಯಲ್ಲಿ ನಿಪಿ–9 ಕ್ಕೆ ಭದ್ರಪ್ಪನ ಸಹಿ ಹಾಕಲು ಪ್ರಯತ್ನ ಮಾಡಲಿಲ್ಲ. ಕಚ್ಚಾ ಬಿಳಿ ಹಾಳೆಯ ಮೇಲೆ ಇರುವ ಪತ್ರವನ್ನು ನಾನು ಓದಲಿಲ್ಲ ಆದರೆ ದೀಕ್ಷಿತರವರು ಓದಿರುತ್ತಾರೆ. ಸದರಿ ಕಚ್ಚಾ ಪತ್ರವನ್ನು ಉಪ ನೋಂದಣಿ ಕಚೇರಿಗೆ ತಂದಿರುವುದಿಲ್ಲ. ಸದರಿ ಕಚ್ಚಾ ಪತ್ರಕ್ಕೆ ಎಷ್ಟು ಭದ್ರಪ್ಪನ ಸಹಿ ಮಾಡಲಾಗಿದೆ ಅಂದರೆ ಸಾಕ್ಷಿಯು ಮೊದಲನೇ ಸಹಿ ಮಾಡಲು ಆತನಿಗೆ ಬರಲಿಲ್ಲ ಸ್ವಲ್ಪ ಕಚಾಪಚಾ ಸಹಿ ಮಾಡಿದನು ಎಂದು ಹೇಳತ್ತಾರೆ. ಉಪ ನೋಂದಣಾಧಿಕಾರಿಗಳಿಗೆ ಭದ್ರಪ್ಪನಿಗೆ ಸಹಿ ಮಾಡಲು ಬರುವುದಿಲ್ಲ ಎಂದು ಹೇಳಿರುವುದಿಲ್ಲ. ಭದ್ರಪ್ಪನಿಗೆ ಆರೋಗ್ಯ ಸರಿ ಇರಲಿಲ್ಲ ಅವನಿಗೆ ಯಾವುದೂ ಹೇಳಿದ್ದು ಕೇಳಲು ತಿಳಿಯುತ್ತಿರಲಿಲ್ಲ , ಬರೆಯಲು ಬರತ್ತಿರಲಿಲ್ಲ ಆದರೂ ಸಹ ವಾದಿ ಕಡೆಯಿಂದ ಹಣವನ್ನು ತೆಗೆದುಕೊಂಡು ದುರುಪಯೋಗ ಮಾಡಿಕೊಂಡು ಭದ್ರಪ್ಪ ವಿಲ್ ಮಾಡಿಕೊಟ್ಟಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6) 19 ನೇ ತಾರೀಖನಂದು ಮಧ್ಯಾಹ್ನ 1-45 ಗಂಟೆ ದೀಕ್ಷಿತ ರವರ ಕಚೇರಿಗೆ ಹೋದೆ ಭದ್ರಪ್ಪನ ದಾಖಲೆ ಕೊಟ್ಟೆವು ನಂತರ 20 ನೇ ತಾರೀಖಿನಂದು ನಾನು ಮತ್ತು ಶೇಖರಪ್ಪ ಮೊದಲು ಹೋದೆವು ಭದ್ರಪ್ಪ ನಂತರ ಅಲ್ಲಿಗೆ ಬಂದನು ಎಂದು ಹೇಳುತ್ತಾರೆ. ನಿಖರವಾಗಿ 19 ಮತ್ತು 20 ನೇ ತಾರೀಖು ಎಂದು ಹೇಳುತ್ತಿದ್ದೇನೆ ಅಂದರೆ ಸರಿ. ನನ್ನ ಮದುವೆಯ ದಿನಾಂಕ ಹೇಳಲು ಬರುತ್ತಿದಿಯಾ ಅಂದರೆ ಸಾಕ್ಷಿಯು ನನ್ನ ಮದುವೆ ಆಗಿ 50 ವರ್ಷ ಆಗಿದೆ ಆದರೆ ನೆನಪಿಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಮೂರು ಜನ ಮಕ್ಕಳು ಅದರಲ್ಲಿ ನನ್ನ ಮಗ 2-3-2002 ರಲ್ಲಿ ಹುಟ್ಟಿರುತ್ತಾನೆ , ನನ್ನ ಮಗಳು ಅದಕ್ಕಿಂತ 2 ವರ್ಷಗಳ ಮುಂಚೆ ಮತ್ತೊಬ್ಬ ಮಗಳು 5 ವರ್ಷ ಮುಂಚೆ ಹುಟ್ಟಿರುತ್ತಾರೆ, ಅವರು 3 ಜನ ಮಕ್ಕಳು ಶಾಲೆ ಕಲಿತಿಲ್ಲ ನನಗೆ ದುಡ್ಡು ಇರಲಿಲ್ಲ. ನಾನು 5 ನೇ ತರಗತಿ ಉರ್ದು ಶಾಲೆಯಲ್ಲಿ ಓದಿರುತ್ತೇನೆ. ಉರ್ದು ಶಾಲೆಯಲ್ಲಿ 5 ನೇ ತರಗತಿಯಿಂದ ಇಂಗ್ಲೀಷ್ ಕಲಿಸುತ್ತಾರೆ ನಾನು ಇಂಗ್ಲೀಷ್ ಕಲಿಯಲು ಹೋಗಿಲ್ಲ. ನನಗೆ ಇಂಗ್ಲೀಲಷ್ ಓದಲು ಬರೆಯಲು ಬರುವುದಿಲ್ಲ ನನ್ನ ಹೆಸರನ್ನು ಇಂಗ್ಲೀಷ್ ನಲ್ಲಿ ಬರೆಯುತ್ತೇನೆ ಎಂದು ಹೇಳುತ್ತಾರೆ. ನಿಪಿ-9 ರಲ್ಲಿ ನನ್ನ ಸಹಿ ಇರುವುದಿಲ್ಲ ಅಂದರೆ ಸರಿಯಲ್ಲ. ನಿಪಿ-9 ರಲ್ಲಿರುವ ಸಹಿ ನನ್ನದು ಅಲ್ಲ ಅಂದರೆ ಸರಿಯಲ್ಲ. ನಿಪಿ-9 (ಬಿ) ಯಾರದು ಸಹಿ ಅಂದರೆ ನನಗೆ ಕಣ್ಣು ಮಂಜಾಗಿ ಕಾಣುತ್ತದೆ ಹಾಗಾಗಿ ಕಾಣುವುದಿಲ್ಲ ಎಂದು ಹೇಳುತ್ತಾರೆ. ನಿಪಿ-9(ಎ) ಸಹ ನನಗೆ ಕಾಣುತ್ತಿಲ್ಲ. ಉಪ ನೋಂದಣಾಧಿಕಾರಿಗಳ ಮುಂದೆ ಎಷ್ಟು ಹೆಬ್ಬಿಟ್ಟಿನ ಗುರುತುಗಳನ್ನು ಭದ್ರಪ್ಪ ಹಾಕಿರುತ್ತಾನೆ ಅಂದರೆ ಸಾಕ್ಷಿಯು ನಮ್ಮಮುಂದೆ 3 ಹೆಬ್ಬಿಟ್ಟಿನ ಗುರುತುಗಳನ್ನು ಮಾತ್ರ ನಿಪಿ-9 ಕ್ಕೆ ಹಾಕಿರುತ್ತಾನೆ. ನಿಪಿ-9 ರಲ್ಲಿರುವ ಹೆಬ್ಬಿಟ್ಟಿನ ಗುರುತುಗಳು ಭದ್ರಪ್ಪನ ಹೆಬ್ಬಿಟ್ಟಿನ ಗುರುತುಗಳು ಅಲ್ಲ ಅಂದರೆ ಸರಿಯಲ್ಲ.

7) ತೊರ್ಗಸಿಯಲ್ಲಿ ಭದ್ರಪ್ಪ ಮಾತ್ರ ಪರಿಚಯ ಅವನು ಸಿನಿಮಾ ನೋಡಲು ಬರುತ್ತಿದ್ದದರಿಂದ ಅವನು ಒಬ್ಬನೇ ಪರಿಚಯ. ಆ ದಿನ ವಾದಿ ಜಯಪ್ಪ ಬಂದಿರಲಿಲ್ಲ. ಆ ದಿನ ಪತ್ರವನ್ನು ಭದ್ರಪ್ಪ ತೆಗೆದುಕೊಂಡು ಹೋಗಿರುತ್ತಾನೆ. ವಿಲ್ ಆದ ನಂತರ 2 ದಿನ ಬಿಟ್ಟು ಭದ್ರಪ್ಪ ಬಂದಿದ್ದ ಚಹವನ್ನು ಸಹ ಕುಡಿದಿದ್ದೆವು ನಂತರ ಎಲ್ಲಿ ಹೋದನು ಎಂದು ಗೊತ್ತಿಲ್ಲ. ಭದ್ರಪ್ಪ ಯಾವಾಗ ತೀರಿಕೊಂಡನು ಎಂಬುದು ಸಹ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಸಂಗತಿಗಳು ನನಗೆ ಗೊತ್ತಿರುತ್ತವೆ. ನನ್ನ ಮುಖ್ಯ ವಿಚಾರಣೆಯಲ್ಲಿ ಭದ್ರಪ್ಪನಿಗೆ ಸಹಿ ಮಾಡಲು ಬರುತ್ತಿರಲಿಲ್ಲ ಹಾಗಾಗಿ ಆತನ ಹೆಬ್ಬಿಟ್ಟಿನ ಗುರುತು ತೆಗೆದುಕೊಳ್ಳಲಾಗಿದೆ ಎಂದು ಬರೆದಿರುವುದಿಲ್ಲ ಹಾಗೂ ಅದನ್ನು ಹೇಳಿ ಬರೆಯಿಸಿರುವುದಿಲ್ಲ ಅಂದರೆ ಸರಿ. ಭದ್ರಪ್ಪನಿಗೆ ಆರೋಗ್ಯ ಸರಿಇರಲಿಲ್ಲ ಅದನ್ನು ಬರೆಸಿದ್ದರೆ ಭದ್ರಪ್ಪನ ಆರೋಗ್ಯನ ವಿಷಯ ಗೊತ್ತಾಗುತ್ತದೆ ಎಂದು ಹೇಳಿ ಬರೆಸಿಲ್ಲ ಅಂದರೆ ಸರಿಯಲ್ಲ. ನಿಪಿ–9 ರಲ್ಲಿ ನನ್ನ ಸಹಿ ಇರುವುದಿಲ್ಲ ಹಾಗೂ ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ ಆದ್ದರಿಂದ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

c/c 2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.